ಶ್ರೀ ಮಲ್ಲಿಕಾರ್ಜುನ ಬಿ. ಬನ್ನಿ.—ಸ್ವಾಮಿ, ಬಾದಾಮಿ ತಾಲ್ಲೂಕಿನ ಹಿರೇಬೂದಿಹಾಳ ಗ್ರಾಮದ ನೀರು ಸರಬರಾಜು ಯೋಜನೆಗಾಗಿ ಶೇ. 10ರಷ್ಟು ಸಾರ್ವಜನಿಕ ವಂತಿಗೆಯ ರೂಪದಲ್ಲಿ 5 ಸಾವಿರ ರೂಪಾಯಿಗಳನ್ನು ಕಟ್ಟಲಾಗಿದೆ ಎಂದು ಹೇಳಿದ್ದೀರಿ. ತಾ॥ 11-8-77ರಂದು ಈ ಹಣವನ್ನು ತುಂಬಿಸಿಕೊಂಡಿದ್ದರೂ ಕೂಡ ಇದುವರೆಗೂ ಆ ಯೋಜನೆಯನ್ನು ತೆಗೆದುಕೊಂಡಿಲ್ಲಾ. ಆದುದರಿಂದ ಈ ಯೋಜನೆ ಅತ್ಯಗತ್ಯವಾಗಿ ಆಗಲೇ ಬೇಕಾಗಿರುವುದರಿಂದ ಇದನ್ನು ಶೀಘ್ರದಲ್ಲೇ ಮಂಜೂರಾತಿ ಕೊಟ್ಟು ಮಾಡಿಕೊಡುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಸರ್ಕಾರ ಈ ವರ್ಷವೇ ಅದಕ್ಕೆ ಮಂಜೂರಾತಿಯನ್ನು ಮಾಡಿಕೊಡ ಲಾಗುವುದು.

ವಿಷಯ :— ಸರಕಾರದಿಂದ ಸಹಾಯಧನ ಪಡೆಯುತ್ತಿರುವ ಖಾಸಗೀ ಶಿಕ್ಷಣ ಸಂಸ್ಥೆಗಳು ದುಬಾರಿ ಶುಲ್ಕವನ್ನು ವಸೂಲು ಮಾಡುತ್ತಿರುವುದು.

ಪ್ರ. 141(68) ಶ್ರೀ ಜಿ.ಎಸ್. ಬಸವರಾಜ್ (ಆನವೇರಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ರಾಜ್ಯದಲ್ಲಿ ಸರ್ಕಾರದ ಸಹಾಯಧನ ಪಡೆಯುತ್ತಿರುವ ಖಾಸಗೀ ಶಿಕ್ಷಣ ಸಂಸ್ಥೆಗಳು ಅಂದರೆ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಕಾಲೇಜುಗಳು ಮತ್ತು ತಾಂತ್ರಿಕ ಕಾಲೇಜುಗಳು ದುಬಾರಿ ಶುಲ್ಕವನ್ನು ವಸೂಲು ಮಾಡುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಈ ಸಂಸ್ಥೆಗಳು ವಸೂಲು ಮಾಡುವ ಶುಲ್ಕದ ಲೆಕ್ಕ ಪತ್ರಗಳನ್ನು ಸರ್ಕಾರದವರು ಪರಿಶೀಲಿ ಸುತ್ತಿದ್ದಾರೆಯೆ ;

ಇ. ದುಬಾರಿ ಶುಲ್ಕವನ್ನು ವಸೂಲು ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಟ್ಟಡಕ್ಕಾಗಿ ಹಣ ವಸೂಲು ಮಾಡುತ್ತಿದ್ದು ಕಟ್ಟಡ ಸಹಾ ಕಟ್ಟದೆ ಬಾಡಿಗೆ ಮನೆಗಳಲ್ಲಿ ಶಾಲೆಗಳನ್ನು ನಡೆಸು ತ್ತಿದ್ದು, ಕಟ್ಟಡದ ಹಣವನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ರಾಚಯ್ಯ (ವಿದ್ಯಾ ಮಂತ್ರಿಗಳು) :—

ಅ. –ಇಲ್ಲ–

ಆ. –ಹೌದು–

ಇ. –ಇಲ್ಲ–

ಶ್ರೀ ಜಿ. ಎಸ್. ಬಸವರಾಜು.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಯ(ಅ)ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದಾರೆ, (ಆ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದಾರೆ ಮತ್ತು (ಇ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದಾರೆ ಸ್ವಾಮಿ ಇದರ ಅರ್ಥ ಏನು?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು, ಆ ವಿಷಯಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ಅಂತ ಕೇಳಿದ್ದಾರೆ, ಆದುದರಿಂದ ಅದು ಇಲ್ಲ ಎಂದು ಉತ್ತರ ಕೊಟ್ಟಿದೆ.

ಶ್ರೀ ಜಿ. ಎಸ್. ಬಸವರಾಜು.—ಸ್ವಾಮಿ; ಬೆಂಗಳೂರಿನಲ್ಲಿ ಸುಮಾರು ಒಂದು ಸಾವಿರ ಶಿಕ್ಷಣ ಸಂಸ್ಥೆಗಳು ಇವೆ. ಒಬ್ಬೊಬ್ಬರು ಕೂಡ 5 ರಿಂದ 10 ಸಾವಿರದವರೆಗೆ ಶುಲ್ಕವನ್ನು ಕಲೆಕ್ಟ್ ಮಾಡು ತ್ತಾರೆ. ಉದಾಹರಣೆಗೆ ಬೆಂಗಳೂರಿನಲ್ಲಿರುವ ಆರಬಿಂದೋ ಶಿಕ್ಷಣ ಸಂಸ್ಥೆ, ಬಾಲ್ವಿನ್ ಶಿಕ್ಷಣ ಸಂಸ್ಥೆ ಮತ್ತು ಈಸ್ಟ್‌ವೆಸ್ಟ್ ಶಿಕ್ಷಣ ಸಂಸ್ಥೆ ಇವುಗಳು ಬಹಳ ದುಬಾರಿಯಾಗಿ ಶುಲ್ಕವನ್ನು ಕಲೆಕ್ಟ್ ಮಾಡುತ್ತಾರೆ. ಇದರ ಬಗ್ಗೆ ಸರ್ಕಾರ ಗಮನ ತೆಗೆದುಕೊಳ್ಳದೇ ಹೋದರೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಇಂಗ್ಲಿಷ್‌ನಲ್ಲಿ ಒಂದು ಗಾದೆ ಇದೆ. ಅದು ಏನೆಂದರೆ When Rome was burning nero was biddling ಎಂದು. ಈ ದುರ್ವ್ಯವಹಾರವನ್ನು ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದು ಕೊಂಡಿದ್ದೀರಾ? ಇನ್ನು ಮಾನ್ಯ ಮಂತ್ರಿಗಳು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಒಂದು ಮಸೂದೆಯನ್ನು ಈ ಸಭೆಯಲ್ಲಿ ಇಟ್ಟಿದ್ದಾರೆ. ಅದರ ಬಗ್ಗೆ ಇನ್ನೂ ಉತ್ತರ ಬಂದಿಲ್ಲಾ. ಈ ರೀತಿಯಾಗಿ ಬೇಜವಾ ಬ್ದಾರಿಯಾದ ಉತ್ತರ ಕೊಟ್ಟರೆ ನಾವು ಮತ್ತೇನು ಕೇಳುವುದು.

ಶ್ರೀ ಬಿ. ರಾಚಯ್ಯ.—ನಾನೇನೂ ಬೇಜವಾಬ್ದಾರಿಯಾದ ಉತ್ತರ ಕೊಟ್ಟಿಲ್ಲಾ. ಮಾನ್ಯ ಸದಸ್ಯರು ಆ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಅಂತ ಕೇಳಿದ್ದಾರೆ ಅದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದೆ. ಎರಡನೆಯದಾಗಿ ಈಗಾಗಲೇ ಕ್ಯಾಪಿಟೇಷನ್ ಶುಲ್ಕವನ್ನು ತೆಗೆಯುವ ಬಗ್ಗೆ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದೆ. ಅದರ ಬಗ್ಗೆ ಚರ್ಚೆ ಬಂದಾಗ ಮಾನ್ಯ ಸದಸ್ಯರು ಈ ವಿಚಾ ರದಲ್ಲಿ ಏನು ಸಲಹೆಗಳನ್ನು ಕೊಡಬೇಕೋ ಕೊಡಲಿ. ಮತ್ತೆ ಈಗ ಏಡೆಡ್ ಸ್ಕೂಲುಗಳು ಸರ್ಕಾರ ನಿಗದಿ ಮಾಡಿರುವ ಪ್ರಕಾರ ವಸೂಲ್ಮಾಡುತ್ತಿದ್ದಾರೆ ಆದುದರಿಂದ (ಇ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಅಂತ ಹೇಳಿದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದುದು ಅನ್ ಏಡೆಡ್ ಸ್ಕೂಲುಗಳ ವಿಚಾರ ಏಡೆಡ್

ಸ್ಕೂಲುಗಳಲ್ಲಿ ಲೆಕ್ಕಪತ್ರಗಳನ್ನು ನಾವು ತನಿಖೆ ಮಾಡಿಸುತ್ತೇವೆ. ಆಕೌಂಟೆಂಟ್ ಜನರಲ್ ಅವರು ತನಿಖೆ ಮಾಡುತ್ತಾರೆ. ಇವರು ಯಾರು ಯಾರಿಗೆ ರಸೀತಿಯನ್ನು ಕೊಟ್ಟಿದ್ದಾರೆ ಅದರಂತೆ ಲೆಕ್ಕಪತ್ರ ಗಳನ್ನು ಸರಿಯಾಗಿಟ್ಟಿದ್ದಾರೆಂದು ಕಂಡುಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.--ಈಗ ಸರ್ಕಾರದವರು ಮಾನ್ಯ ಸದಸ್ಯರು ಕೇಳಿದ ಆ. ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಸದಸ್ಯರು ಇಂಥ ಒಂದು ಪ್ರಶ್ನೆಯನ್ನು ದೊರಿನ ರೂಪವಾಗಿ ಕೊಟ್ಟಾಗ ತಾವು ಉತ್ತರವನ್ನು ಕೊಡುವ ಮೊದಲು ಈ ಬಗ್ಗೆ ತನಿಖೆಗೆ ಯಾರನ್ನಾದರೂ ಕಳುಹಿಸಿದ್ದೀರಾ? ಕಳುಹಿಸಿದ್ದರೆ ಅದರ ವರದಿಯು ಬಂದಿದೆಯೇ ಬಾರದಿದ್ದರೆ ತನಿಖೆ ಮಾಡಿ ಏಕೆ ತಾವು ಉತ್ತರವನ್ನು ಕೊಡಲಿಲ್ಲ? ತನಿಖೆ ಮಾಡದೆ ಉತ್ತರ ಕೊಡಲಿಕ್ಕೆ ಕಾರಣ ಏನು?

ಶ್ರೀ ಬಿ. ರಾಚಯ್ಯ.--ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ತಕ್ಕಂತೆ ಉತ್ತರವನ್ನು ಕೊಟ್ಟಿದ್ದೇವೆ ಮಾನ್ಯ ಸದಸ್ಯರು ಇಂಥಿಂಥ ಕಾಲೇಜುಗಳಲ್ಲಿ ದುಬಾರಿ ಶುಲ್ಕವನ್ನು ತೆಗೆದುಕೊಳ್ಳುತ್ತಿದ್ದಾರೆಂದು ಪ್ರಶ್ನೆ ಯನ್ನು ಕೇಳಿದ್ದರೆ ಅದನ್ನು ತನಿಖೆ ಮಾಡಿಸಿ ಉತ್ತರ ಹೇಳಲಿಕ್ಕೆ ಅವಕಾಶವಾಗುತ್ತಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದು ಪ್ರಶ್ನೆಯನ್ನು ಮಾನ್ಯ ಸದಸ್ಯರು ಸ್ಪಷ್ಟವಾಗಿ ಕೇಳಿದ್ದಾರೆ. ಇದರ ಬಗ್ಗೆ ಸ್ವಲ್ಪವಾದರೂ ತನಿಖೆ ಮಾಡಿಸಿ ಉತ್ತರ ಕೊಡದಿದ್ದರೆ ಅಂಥ ಉತ್ತರ ನಮಗೆ ಬೇಕಾಗಿಲ್ಲ. ಇದು ಬೇಜವಾಬ್ದಾರಿಯ ಉತ್ತರ; ಯಾರೋ ಒಬ್ಬ ಕ್ಲರ್ಕ್ ಬರೆದ ಉತ್ತರವನ್ನು ಇಲ್ಲಿ ನಮಗೆ ಕೊಟ್ಟರೆ ಅದು ಸಮಂಜಸವಾಗುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರು ಈ ಪ್ರಶ್ನೆಯನ್ನು ವಿತ್‌ಪೆಲ್ಡ್ ಮಾಡಬೇಕು. ಏನನ್ನು ವಿಚಾರ ಮಾಡದೆ ಪಡೆದ ಉತ್ತರವನ್ನು ಇಲ್ಲಿ ಸ್ವೀಕಾರ ಮಾಡು ವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.--ನಾನು ಜವಾಬ್ದಾರಿಯಿಂದಲೇ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮಂತ್ರಿಗಳಾಗಿದ್ದಾಗ ಉತ್ತರವನ್ನು ತರಿಸಿಕೊಳ್ಳುತ್ತಿದ್ದರೋ ಅದೇ ರೀತಿ ಯಲ್ಲಿ ನಾವು ಉತ್ತರವನ್ನು ಪಡೆದುಕೊಂಡು ಮಾನ್ಯ ಸದಸ್ಯರಿಗೆ ಕೊಡುತ್ತಿದ್ದೇವೆ. ಮಾನ್ಯಸದಸ್ಯರು ಸ್ಪಷ್ಟವಾಗಿ ಇಂಥ ಕಾಲೇಜಿನಲ್ಲಿ ಇಂಥ ಸ್ಕೂಲಿನಲ್ಲಿ ದುಬಾರಿ ಶುಲ್ಕವನ್ನು ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿದ್ದಾರೆ. ಅದನ್ನು ನಾವು ತನಿಖೆ ಮಾಡಿಸದಿದ್ದರೆ ಅದು ಬೇಜವಾಬ್ದಾರಿಯಾಗುತ್ತಿತ್ತು. ಇಂಥ ಪದಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಉಪಯೋಗ ಮಾಡುವುದು ಅವರಿಗೆ ಗೌರವ ತರತಕ್ಕದ್ದು ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.--ತಾವು ಜವಾಬ್ದಾರಿಯಿಂದ ವರ್ತನೆ ಮಾಡಬೇಕು. ಏತಕ್ಕೆಂದರೆ ಇಲ್ಲಿ ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಫೀನ್ನು ವಸೂಲು ಮಾಡುತ್ತಿದ್ದಾರೆಂದು ಹೇಳಿರುವಾಗ ಜವಾಬ್ದಾರಿಯುತವಾಗಿ ಇದರ ಬಗ್ಗೆ ಉತ್ತರವನ್ನು ತರಿಸಿ ವಿಚಾರ ಮಾಡಿ ಉತ್ತರ ಕೊಡಬೇಕೇ ಹೊರತು ವಿಚಾರ ಮಾಡದೆ, ಸೆಕ್ರಟರಿಯವರಿಂದಲೋ, ಸಿ.ಪಿ.ಐ. ಅವರಿಂದಲೋ ಉತ್ತರವನ್ನು ತರಿಸಿ ಕೊಡುವುದು ಸಮಂಜಸವಾಗುವುದಿಲ್ಲ,

ಅಧ್ಯಕ್ಷರು.--ಡಿಮ್ಯಾಂಡ್ ಬಂದಾಗ ಈ ವಿಚಾರವನ್ನು ಚರ್ಚೆ ಮಾಡೋಣ.

Sri B. Rachaiah.--Sir, I take strong objection to the remarks made by the Hon'ble Leader of the Opposition. Let them bring specific cases to the notice of the Government. We will certainly investigate them.

ಶ್ರೀ ಲಕ್ಷ್ಮಣಯ್ಯ.--ಅವರ ಬಾಯಿಂದ ಉತ್ತಮವಾದ ಪದ ಬರಬೇಕು, ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮಲ್ಲಿಗೆ ಹೊಸದಾಗಿ ಸಭೆಗೆ ಬಂದವರಲ್ಲ ಅವರೂ ಸಹ ಸಭೆಯಲ್ಲಿ ಜವಾಬ್ದಾರಿ ಯುತವಾಗಿ ಪದಗಳನ್ನು ಬಳಸಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್.--ಮಾನ್ಯ ಮಂತ್ರಿಗಳು ಹಿಂದೆ ಯಾವ ರೀತಿಯಾಗಿ ಉತ್ತರವನ್ನು ತರಿಸಲಾಗುತ್ತಿತ್ತೋ ಅದೇ ರೀತಿಯಲ್ಲಿ ಉತ್ತರ ತರಿಸುತ್ತಿದ್ದೇವೆಂದು ಹೇಳಿದರು, ಈ ವಿಚಾರದಲ್ಲಿ ಜನಗಳ ಮಧ್ಯೆ ಶಾಲೆಗಳವರು ಹೆಚ್ಚಾಗಿ ಶುಲ್ಕವನ್ನು ವಸೂಲು ಮಾಡುತ್ತಿದ್ದಾರೆಂದು ಕಳಕಳಿ ಇದೆ. ಇದಕ್ಕೆ ಮಾನ್ಯ ಸದಸ್ಯರು ಸ್ಪೆಸಿಫಿಕ್‌ಆಗಿ ಪ್ರಶ್ನೆಯನ್ನು ಕೇಳಿದ್ದರೂ ಸಹ ಸರ್ಕಾರದ ವರು ಇದರ ಬಗ್ಗೆ ತನಿಖೆ ನಡೆಸಿ ಯಾರು ಯಾರು ಈ ರೀತಿಯಾಗಿ ಮಾಡುತ್ತಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಭರವಸೆ ಕೊಡುತ್ತೀರಾ?

ಶ್ರೀ ಬಿ. ರಾಚಯ್ಯ.—ಈ ಒಂದು ನಿಯಂತ್ರಣವನ್ನು ಮಾಡುವುದಕ್ಕೊಸ್ಕರವಾಗಿ ಕ್ಯಾಪಿಟೇಷನ್ ಬಿಲ್‌ನ್ನು ಸಭೆಯಲ್ಲಿ ಇಂಟರ್‌ಡ್ಯೂಸ್ ಮಾಡಿದ್ದೇವೆ, ಅಲ್ಲದೆ ಕಾಂಪ್ರಹೆನ್ಸೀವ್ ಎಜುಕೇಷನ್ ಬಿಲ್ಲನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಮಾನ್ಯ ಸದಸ್ಯರು ಆಗ ಏನೇನು ಸಲಹೆಗಳನ್ನು ಈ ಬಗ್ಗೆ ಕೊಡಬೇಕೋ ಅದನ್ನು ಕೊಟ್ಟರೆ ಅದಕ್ಕೆ ಒಂದು ತಿದ್ದುಪಡಿಯನ್ನು ತಂದಾದರೂ ಇದರ ಬಗ್ಗೆ ನಿಯಂತ್ರಣ ಮಾಡುತ್ತೇವೆ, ಜೊತೆಯಲ್ಲಿ ನಮಗೆ ಎಲ್ಲೆಲ್ಲಿ ಕಂಪ್ಲೇಂಟ್ಸ್ ಬಂದಿವೆ ಅಂಥ ಕಡೆ ವಿಚಾರ ಮಾಡಿದ್ದೇವೆ. ಏಡೆಡ್ ಗವರ್ನಮೆಂಟ್ ಸ್ಕೂಲುಗಳಲ್ಲಿ ನಾವು ಎಷ್ಟು ಶುಲ್ಕವನ್ನು ನಿಗದಿ ಮಾಡಿ

ದ್ದೇವೆ ಆ ಪ್ರಕಾರ ಫಿ ತೆಗೆದುಕೊಳ್ಳುತ್ತಿದ್ದಾರೆಂದು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಕೆ. ರಾಮಭಟ್ಟ.—ಮಾನ್ಯ ಮಂತ್ರಿಗಳು ಎಜುಕೇಷನ್ ಬಿಲ್ ಸಭೆಯ ಮುಂದೆ ಲರುತ್ತದೆಂದು ಹೇಳಿದ್ದಾರೆ. ಈಗಾಗಲೇ ನಡೆದಿರತಕ್ಕ ಪ್ರಕರಣಗಳ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಬಿ. ರಾಚಯ್ಯ.—ಏಡೆಡ್ ಸ್ಕೂಲುಗಳಲ್ಲಿ ಸರ್ಕಾರಿ ಸ್ಕೂಲುಗಳಲ್ಲಿ ನಮ್ಮ ನಿಯಂತ್ರಣ ಇದೆ. ಆದರೆ ಖಾಸಗಿ ಶಾಲೆಗಳ ಮೇಲೆ ನಮ್ಮ ನಿಯಂತ್ರಣ ಇಲ್ಲ. ಅವರಿಗೆ ಗ್ರಾಂಟ್ ಇನ್ ಏಡ್ ನಾವು ಕೊಡುತ್ತಿಲ್ಲ. ಈ ದೃಷ್ಟಿಯಿಂದ ಅವರಿಗೆ ಏನಾದರೂ ಕಡಿವಾಣ ಇಟ್ಟುಕೊಳ್ಳೋಣ ಎಂದು ಬಿಲ್ಲನ್ನು ತಂದಿದ್ದೇವೆ. ಅದು ಪಾಸ್ ಆದಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ನಾವು ಕ್ರಮ ತೆಗೆದುಕೊಂಡರೂ ಕೂಡ ಅವರು ನ್ಯಾಯಾಲಯಕ್ಕೆ ಹೋಗಿ ಸ್ಟೇ ತರುತ್ತಾರೆ, ಈ ಕಾರಣದಿಂದ ಏಡೆಡ್ ಸ್ಕೂಲುಗಳಲ್ಲಿ ಏಡೆಡ್ ಕಾಲೇಜುಗಳಲ್ಲಿ ಹೆಚ್ಚುವರಿ ಫೀ ಏನಾದರೂ ತೆಗೆದು ಕೊಂಡಿದ್ದರೆ ಅದನ್ನು ತನಿಖೆ ಮಾಡಿಸಿ ಸಭೆಯ ಮುಂದೆ ಏನು ಕ್ರಮವನ್ನು ತೆಗೆದುಕೊಂಡಿದ್ದೇನೆಂದು ಹೇಳುತ್ತೇನೆ.

ವಿಷಯ :– ಮಂಗಳೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವುದು.

ಪ್ರ. 142(91) ಶ್ರೀ ವಿ. ಧನಂಜಯ ಕುಮಾರ್ (ಮಂಗಳೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಮಂಗಳೂರು ಸರ್ಕಾರಿ ಹಿರಿಯ ಕಾಲೇಜಿನಲ್ಲಿ ಬೇರೆ ಬೇರೆ ವಿಷಯಗಳನ್ನು ಕಲಿಸಲಾಗುತ್ತಿದೆಯೇ ಮತ್ತು ಹಾಗಿದ್ದಲ್ಲಿ ಎಷ್ಟು ಮಂದಿ ಲೆಕ್ಚರರ್, ರೀಡರ್ ಮತ್ತು ಪ್ರೊಫೆಸರ್‌ಗಳ ಹುದ್ದೆಗಳಿಗೆ ಅನುಮತಿ ನೀಡಲಾಗಿದೆ;

ಆ. ಈ ಪೈಕಿ ಎಷ್ಟು ಹುದ್ದೆಗಳು ಖಾಲಿ ಇವೆ ;

ಇ. ಎಷ್ಟು ಸಮಯದಿಂದ ಈ ಹುದ್ದೆಗಳು ಖಾಲಿ ಇವೆ :

ಈ. ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು :—

ಅ. ಮಂಗಳೂರು ಸರ್ಕಾರಿ ಹಿರಿಯ ಕಾಲೇಜಿನಲ್ಲಿ ಈ ಕೆಳಕಂಡ ವಿಷಯಗಳನ್ನು ಬೋಧಿಸಲಾಗುತ್ತಿದೆ.

1. ಇಂಗ್ಲಿಷ್	7. ಅರ್ಥಶಾಸ್ತ್ರ	13. ರಸಾಯನ ಶಾಸ್ತ್ರ
2. ಕನ್ನಡ	8. ಸಮಾಜಶಾಸ್ತ್ರ	14. ಗಣಿತ ಶಾಸ್ತ್ರ
3. ಹಿಂದಿ	9. ರಾಜಕೀಯ ಶಾಸ್ತ್ರ	15. ಸಂಖ್ಯಾಶಾಸ್ತ್ರ
4. ಸಂಸ್ಕೃತ	10. ಭೂಗೋಳಶಾಸ್ತ್ರ	16. ಸಸ್ಯಶಾಸ್ತ್ರ
5. ಮಲಯಾಳಂ	11. ವಾಣಿಜ್ಯಶಾಸ್ತ್ರ	17. ಪ್ರಾಣಿಶಾಸ್ತ್ರ
6. ಇತಿಹಾಸ	12. ಭೌತಶಾಸ್ತ್ರ	18. ಗೃಹ ವಿಜ್ಞಾನ

ಮೇಲ್ಕಂಡ ವಿಷಯಗಳನ್ನು ಬೋಧಿಸಲು ಕೆಳಕಂಡ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿವೆ ಮತ್ತು ಕೆಳಕಂಡ ಬೋಧಕ ವರ್ಗದವರನ್ನು ನೇಮಿಸಲಾಗಿದೆ.

ಕ್ರ. ಸಂ.	ವಿಷಯಗಳು	ಮಂಜೂರಾದ ಹುದ್ದೆಗಳು			ಭರ್ತಿ ಮಾಡಲಾದ ಹುದ್ದೆಗಳು			ಖಾಲಿ ಇರುವ ಹುದ್ದೆಗಳು		
		ಪ್ರೊ	ರೀ	ಲೇ	ಪ್ರೊ	ರೀ	ಲೆ	ಪ್ರೊ	ರೀ	ಲೆ
1.	ಇಂಗ್ಲೀಷ್	—	1	4	—	—	4	—	1	—
2.	ಕನ್ನಡ	1	—	5	1	—	3	—	—	2
3.	ಸಂಸ್ಕೃತ	--	--	2	—	--	1	—	--	1
4.	ಹಿಂದಿ	1	--	2	—	--	3	1	—	—
5.	ಮಲಯಾಳಂ	--	—	1	--	--	1	--	--	--
6.	ಇತಿಹಾಸ	--	1	3	--	1	3	--	--	--